

ಈಗಾಗಲೇ ನಿಮಗೆ 'ಕಾರ್ಪೆಂಟರ್ ಪೇರೆಂಟಿಂಗ್' ಎಂದರೆ ಏನಿರಬಹುದೆಂಬ ಕಲ್ಪನೆ ಬಂದಿರಬಹುದು. ಕಾರ್ಪೆಂಟರ್ ಏನು ಮಾಡುತ್ತಾನೆ? ಅವನಿಗೆ ತಾನು ಕೆಲಸ ಮಾಡುತ್ತಿರುವ ವಸ್ತು ಯಾವ ರೀತಿ ಇರಬೇಕೆಂದು ಮೊದಲೇ ತೀರ್ಮಾನ ಮಾಡಿರುತ್ತಾನೆ. ಇರುವ ಮರದಲ್ಲಿ ಕುರ್ಚಿ ಮಾಡಬೇಕೋ, ಮಂಚ ಮಾಡಬೇಕೋ, ಏನು ಬೇಕೆಂದು ಮೊದಲೇ ನಿರ್ಧರಿಸಿರುತ್ತಾನೆ. ಕುರ್ಚಿಯನ್ನು ಮಾಡಬೇಕೆಂದರೆ, ಅವನ ಮನಸ್ಸಿನಲ್ಲಿ ಯಾವ ರೀತಿಯ ಕುರ್ಚಿ, ಎಷ್ಟು ಎತ್ತರದ್ದಿರಬೇಕು, ಯಾವ ಬಣ್ಣ ಎಂಬುದೆಲ್ಲ ಪೂರ್ವ ನಿರ್ಧರಿತವಾಗಿರುತ್ತದೆ. ಅದಕ್ಕೆ ತಕ್ಕ ಹಾಗೆ ಅವನು ಮರ ಕೊಯ್ದು, ತನಗೆ ಬೇಕಾದ ಕುರ್ಚಿಯ ರೂಪ ಕೊಡುತ್ತಾನೆ.

ಗಾರ್ಡನರ್ ಪೇರೆಂಟ್ ಹಾಗೂ ಕಾರ್ಪೆಂಟರ್ ಪೇರೆಂಟ್ ಇಬ್ಬರೂ ತಮ್ಮ ಸಮಯವನ್ನು, ಶ್ರಮವನ್ನು ಮಕ್ಕಳಿಗಾಗಿ ವ್ಯಯಿಸುತ್ತಾರೆ. ಆದರೆ ಗಾರ್ಡನರ್ ಪೇರೆಂಟ್ ಮಗುವಿಗೆ ಏನು ಬೇಕು ಎಂಬುದನ್ನು ನೋಡುತ್ತಾನೆ. ಮಗುವಿನ ಸಾಮರ್ಥ್ಯವನ್ನು ಗುರುತಿಸಿ ಅದರ ಬೆಳವಣಿಗೆಗೆ ಅನುಗುಣವಾಗಿರುವ ವಾತಾವರಣವನ್ನು ನಿರ್ಮಿಸುವಲ್ಲಿ ತನ್ನ ಪರಿಶ್ರಮವನ್ನು ಮಾಡುತ್ತಾನೆ. ಕಾರ್ಪೆಂಟರ್ ಪೇರೆಂಟ್ ಮಗು ಏನಾಗಬೇಕೆಂದು ತಾನು ಬಯಸುತ್ತಾನೋ ಆ ನಿಟ್ಟಿನಲ್ಲಿ ತನ್ನ ಶ್ರಮವನ್ನು ಹಾಕುತ್ತಾನೆ. ಈ ರೀತಿಯ ಪೋಷಕರು ತಮ್ಮ ಗಮನವನ್ನು ತಮಗೆ ಏನು ಬೇಕು ಅನ್ನುವುದರ ಮೇಲೆ ಕೇಂದ್ರೀಕರಿಸಿ, ಮಗುವಿನ ಸಾಮರ್ಥ್ಯವನ್ನು ನಿರ್ಲಕ್ಷಿಸಬಹುದು. ಮಗುವು ತಮಗೆ ಬೇಕಾದ ಕೌಶಲವನ್ನೂ, ನಡವಳಿಕೆಯನ್ನೂ ತೋರದಿದ್ದರೆ ಅದನ್ನು ಎತ್ತಿಹಿಡಿದು, ತಮಗೆ ಬೇಕಾದಂತೆ ಮಗುವನ್ನು ಬದಲಾಯಿಸಲು ಶತ ಪ್ರಯತ್ನ ಮಾಡಬಹುದು.

ಗಾರ್ಡನರ್ ಪೇರೆಂಟಿಂಗ್‌ನಲ್ಲಿ ಬೆಳೆಯುವ ಮಕ್ಕಳಲ್ಲಿ ಆತ್ಮವಿಶ್ವಾಸವು ವೃದ್ಧಿಸುತ್ತದೆ. ಜೀವನ ಕೌಶಲಗಳು ಬೆಳೆಯುತ್ತವೆ. ಬದುಕಲ್ಲಿ ಬರುವ ಸುಖ ದುಃಖಗಳನ್ನು ಧೈರ್ಯದಿಂದ ಎದುರಿಸಲು ಸಿದ್ಧರಾಗಿರುತ್ತಾರೆ. ತಮಗೆ ಇಷ್ಟವಾಗುವ, ತಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗಿರುವ ಕೆಲಸವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಮಕ್ಕಳು ಜವಾಬ್ದಾರಿಯುತ ಪ್ರಜೆಗಳಾಗಿ ಬೆಳೆಯುತ್ತಾರೆ. ಕಾರ್ಪೆಂಟರ್ ಪೇರೆಂಟಿಂಗ್‌ನಲ್ಲಿ ಬೆಳೆಯುವ ಮಕ್ಕಳು ತಮ್ಮ ಸೃಜನಶೀಲತೆಯನ್ನು ಕಳೆದುಕೊಳ್ಳಬಹುದು. ವಿವಿಧ ದೃಷ್ಟಿಕೋನದಿಂದ ನೋಡುವ ಸಾಮರ್ಥ್ಯ ಬೆಳೆಯದೇ ಇರಬಹುದು ಅಥವಾ ತಮ್ಮನ್ನು ಬೇರೆ ಬೇರೆ ಅನುಭವಗಳಿಗೆ ಒಡ್ಡಿಕೊಳ್ಳುವ ಮನಸ್ಥಿತಿ ಇಲ್ಲದೆ ಇರಬಹುದು. ಕೀಳರಿಮೆ ಬರುವ ಸಾಧ್ಯತೆ ಗಳಿಸಬಹುದು. ತಮಗೆ ಇಷ್ಟವಿರದ ಕೆಲಸದಲ್ಲಿ ಅಥವಾ ತಮಗೆ ಕೌಶಲಗಳು ಇರದ ಉದ್ಯೋಗಕ್ಕೆ ಸೇರಿ ಸೋಲುಗಳನ್ನು ಅನುಭವಿಸುವ ಸಾಧ್ಯತೆಗಳು ಹೆಚ್ಚಿರುತ್ತವೆ.

'ವರ್ಲ್ಡ್ ಹೆಲ್ತ್ ಆರ್ಗನೈಸೇಷನ್' ಪ್ರಕಾರ 18 ವರ್ಷವಾಗುವವರೆಗೆ ವ್ಯಕ್ತಿಯನ್ನು ಮಗುವೆಂದೇ ಪರಿಗಣಿಸಲಾಗುತ್ತದೆ. ಮಗುವಿನ ಬೆಳವಣಿಗೆ ಸಕಾರಾತ್ಮಕವಾಗಿ ಆಗಬೇಕಾದರೆ ಮಗುವಿಗೆ ಬೇಕಾದ ರೀತಿಯಲ್ಲಿ ವಾತಾವರಣವನ್ನು ಕಲ್ಪಿಸಬೇಕಾಗುತ್ತದೆ. ಹೇಗೆ ಎಲ್ಲ ಗಿಡಗಳ ಆರೈಕೆ ಒಂದೇ ರೀತಿ ಮಾಡಲಾಗುವುದಿಲ್ಲವೋ ಹಾಗೆ ಎಲ್ಲ ಮಕ್ಕಳಿಗೆ ಒಂದೇ ರೀತಿಯ ವಾತಾವರಣ ಕೆಲಸ ಮಾಡುವುದಿಲ್ಲ. ತೆಂಗಿನ ಗಿಡಕ್ಕೆ ಬೇರೆ ರೀತಿ ಆರೈಕೆ ಬೇಕಾದರೆ, ಸೌತೆಕಾಯಿ ಬಳ್ಳಿಗೆ ಬೇರೆ ರೀತಿಯ ಆಧಾರ ಬೇಕಾಗುತ್ತದೆ. ತೋಟದ ಮಾಲಿಗೆ ಗಿಡಗಳ ಅಗತ್ಯಗಳ ಅರಿವಿರಬೇಕು ಹಾಗೂ ಆರೈಕೆಯ ಕೌಶಲಗಳನ್ನು ಕಲಿತಿರಬೇಕು. ಆಗಲೇ ಆತ ಒಳ್ಳೆಯ ಫಸಲನ್ನು ಬೆಳೆಯಲು ಸಾಧ್ಯ.

ಕಾರ್ಪೆಂಟರ್ ಪೇರೆಂಟಿಂಗ್ ಉದ್ದೇಶಗಳು ಒಳ್ಳೆಯದಿದ್ದರೂ, ಮಕ್ಕಳ ಬೆಳವಣಿಗೆಯಲ್ಲಿ ಈ ಶೈಲಿ ಅಷ್ಟು ಸಹಾಯಕ್ಕೆ ಬರುವುದಿಲ್ಲ. ಹಲಸಿನ ಹಣ್ಣನ್ನು ಕೊಂಡು ನಾವು ಕಲ್ಲಂಗಡಿ ರುಚಿಯನ್ನು ಬಯಸಿದರೆ ಅದರಿಂದ ನಿರಾಶೆಯೇ ಹೆಚ್ಚು. ನಮ್ಮ ಸುಖ ಸಂತೋಷಕ್ಕೆ ಹಲಸಿನ ರುಚಿಯನ್ನು ಕಲ್ಲಂಗಡಿಯ ರುಚಿಯನ್ನು ಯಥಾವತ್ ಸವಿಯುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ.

ಪ್ರತಿ ಮಗುವಿನಲ್ಲಿ ಅದರದೇ ಅನನ್ಯತೆಯನ್ನು ಕಾಣುವಲ್ಲಿ, ಅದಕ್ಕೆ ತಕ್ಕಂತೆ ಬೆಂಬಲ ನೀಡುವಲ್ಲಿ ಗಾರ್ಡನಿಂಗ್ ಪೇರೆಂಟಿಂಗ್ ತುಂಬಾ ಸಹಾಯಕ್ಕೆ ಬರುತ್ತದೆ. ಈ ರೀತಿಯ ಪೇರೆಂಟಿಂಗ್ ಅಭ್ಯಾಸವನ್ನು ಪೋಷಕರು ಹೆಚ್ಚು ಹೆಚ್ಚು ಪಾಲಿಸಿದಷ್ಟೂ ಮಕ್ಕಳ ಭವಿಷ್ಯ ಸುಂದರವಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

